ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER : ದಿನಾಂಕ : DATE : 19/3/2019


# ಜಾಧವ್ ರಾಜೀನಾಮೆ ಅಂಗೀಕರಿಸಿಲ್ಲ

■ ವಿಕ ಸುದ್ದಿಲೋಕ ಕೋಲಾರ

ಶಾಸಕ ಡಾ.ಉಮೇಶ್ ಜಾಧವ್ ಅವರ ರಾಜೀನಾಮೆ ಇನ್ನೂ ಅಂಗೀಕಾರವಾಗಿಲ್ಲ. ಬೇರೆ ಯಾರೂ ಬ್ಬರೂ ನನ್ನನ್ನು ಸಂಪರ್ಕಿಸಿಲ್ಲ ಎಂದು ವಿಧಾನ ಸಭಾಧ್ಯಕ್ಷ ರಮೇಶ್‌ಕುಮಾರ್ ಹೇಳಿದ್ದಾರೆ.



ಶ್ರೀನಿವಾಸಪುರ ತಾಲೂಕು ಅಡ್ಡಗಲ್‌ನಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''ಸಿದ್ದರಾಮಯ್ಯ ಅವರ ದೂರಿಗೆ ಸಂಬಂಧಿಸಿದಂತೆ ಉಮೇಶ್ ಜಾಧವ್ ಅವರು ನೀಡಿರುವ ಪ್ರಮಾಣ ಪತ್ರಕ್ಕೂ ಈಗ ಅವರು ತಾಳಿರುವ ನಿಲುವಿಗೂ ಸಂಯೋಜನೆ ಕಾಣುತ್ತಿಲ್ಲ, ಹಾಗಾಗಿ ಪೂರ್ಣ ಪ್ರಮಾಣ ಪತ್ರವನ್ನು ನೀಡುವಂತೆ ಸೂಚಿಸಿದ್ದೇನೆ. ಪ್ರಮಾಣ ಪತ್ರ ನೀಡಿದ ಬಳಿಕ ನನ್ನ ನಿರ್ಣಯ ಕೈಗೊಳ್ಳುತ್ತೇನೆ,'' ಎಂದು ಹೇಳಿದರು.

''ನಾನೊಬ್ಬ ಜಡ್ಜ್‌ನಂತೆ ಕುಳಿತಿದ್ದೇನೆ. ಒಂದೇ ವಿಷಯಕ್ಕೆ ಒಬ್ಬರೆ ವ್ಯಕ್ತಿಯಿಂದ ಬೇರೆ ಬೇರೆ ಸಂದರ್ಭದಲ್ಲಿ ಪ್ರಮಾಣ ಪತ್ರಗಳು ಅಲ್ಪಾವಧಿಯಲ್ಲಿ ಬಂದಾಗ, ನಾನು ಕಾನೂನು ತಜ್ಞರನ್ನು ಕೇಳಬೇಕು, ನ್ಯಾಯವನ್ನು ನೋಡಬೇಕು, ಸಮಾಜ ಏನೆನ್ನುತ್ತದೆ ಎಂದು ಗಮನಿಸಬೇಕಾಗಲಿದೆ. ಸಂವಿಧಾನ ಹಾಗೂ ಶಾಸನಕ್ಕೆ ಅಪಮಾನವಾಗದಂತೆ ನನ್ನ ಕರ್ತವ್ಯ ನಿರ್ವಹಿಸಬೇಕು. ಇದು ನನ್ನ ಚೌಕಟ್ಟು. ಅದನ್ನು ಮೀರಿ ಒಂದಿಂಚು ಮುಂದೆ ಹೋಗುವುದಿಲ್ಲ. ಉಳಿದ ವಿಷಯಗಳಿಗೂ ನನಗೆ ಸಂಬಂಧ ಇಲ್ಲ'' ಎಂದು ತಿಳಿಸಿದರು.

''ಯಾವೊಬ್ಬ ಶಾಸಕರೂ ನನ್ನ ಜತೆ ಮಾತನಾಡಿಲ್ಲ. ಈ ಹಿಂದೆ ಡಾ.ಉಮೇಶ್ ಜಾಧವ್ ಅವರು ನನ್ನ ಮನೆಗೆ ಬಂದಿದ್ದರು. ತಿಂಡಿ ಸೇವಿಸಿದರು. ರಾಜೀನಾಮೆ ಪತ್ರ ನೀಡಿದರು, ಅದನ್ನು ಸ್ವೀಕರಿಸಿದ್ದೇನೆ. ಅಂಗೀಕಾರ ಮಾಡಿಲ್ಲ. ಬೆಂಗಳೂರಿನಲ್ಲಿ ಚರ್ಚಿಸಿ ತೀರ್ಮಾನ ಮಾಡುತ್ತೇನೆಂದು ಹೇಳಿ ಕಳುಹಿಸಿದ್ದೇನೆ,'' ಎಂದರು.

## ರಾಜೀನಾಮೆ ಅಂಗೀಕಾರಕ್ಕೆ ಆಗ್ರಹ

**ಬೆಂಗಳೂರು: ಚಿಂಚೋಳಿ ಶಾಸಕ ಡಾ.ಉಮೇಶ್ ಜಾಧವ್ ರಾಜೀನಾಮೆಯನ್ನು ತಕ್ಷಣವೇ ಅಂಗೀಕರಿಸಬೇಕೆಂದು ಮಾಜಿ ಸಚಿವ ವೈಜನಾಥ್ ಪಾಟೀಲ್ ಆಗ್ರಹಿಸಿದ್ದಾರೆ. ಈ ಸಂಬಂಧ ವಿಧಾನಸಭಾಧ್ಯಕ್ಷ ಕೆ.ಆರ್. ರಮೇಶ್‌ಕುಮಾರ್ ಅವರಿಗೆ ಪತ್ರ ಬರೆದಿರುವ ವೈಜನಾಥ್ ಪಾಟೀಲ್ ಅವರು, ''ಉಮೇಶ್ ಜಾಧವ್ ಅವರು ಶಾಸಕ ಸ್ಥಾನಕ್ಕೆ ತಮ್ಮ ಬಳಿ ಖುದ್ದಾಗಿ ಬಂದು ರಾಜೀನಾಮೆ ಸಲ್ಲಿಸಿ 15 ದಿನಗಳು ಕಳೆದಿವೆ ಎಂಬುದು ಗೊತ್ತಾಗಿದೆ. ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟ ಕ್ಷಣವೇ ಅವರ ರಾಜೀನಾಮೆಯನ್ನು ಅಂಗೀಕರಿಸಬೇಕಾಗುತ್ತದೆ. ಆದರೆ ಈಗಾಗಲೇ ವಿಳಂಬವಾಗಿದೆ. ಆದ್ದರಿಂದ ತಕ್ಷಣವೇ ರಾಜೀನಾಮೆ ಅಂಗೀಕರಿಸದಿದ್ದರೆ ಹೋರಾಟ ಮಾಡಬೇಕಾಗುತ್ತದೆ,'' ಎಂದು ಎಚ್ಚರಿಕೆ ನೀಡಿದ್ದಾರೆ. ''ಪಕ್ಷಾಂತರ ಮಾಡುವುದು ಪ್ರತಿಯೊಬ್ಬರ ಸಂವಿಧಾನಾತ್ಮಕ ಹಕ್ಕು, ಅವರು ಈಗ ಬೇರೆ ಪಕ್ಷ ಸೇರಿದ್ದಾರೆ,'' ಎಂದು ಪತ್ರದಲ್ಲಿ ತಿಳಿಸಿದ್ದಾರೆ.**

